# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 307 |
| ಸದಸ್ಯರ ಹೆಸರು | ಶ್ರೀ ಸುನೀಲ್ ವಲ್ಯಾಪುರ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 23.09.2020 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಹೈದ್ರಾಬಾದ್ ಕರ್ನಾಟಕ (ಕಲ್ಯಾಣ ಕರ್ನಾಟಕ) ಭಾಗದ ಜನರಿಗೆ ಕಲಂ 371(ಜೆ) ರ ಅಡಿಯಲ್ಲಿ ಅರ್ಹತಾ ಪ್ರಮಾಣ ಪತ್ರಗಳನ್ನು ವಿತರಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; ಎಷ್ಟು ಸಂಖ್ಯೆಯಲ್ಲಿ ಪ್ರಮಾಣ ಪತ್ರಗಳನ್ನು ನೀಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 06 ಪಿಎಲ್ಎಕ್ಸ್ 2012; ದಿನಾಂಕ: 06.11.2013 ರಲ್ಲಿ, ಭಾರತ ಸಂವಿಧಾನ 371 (ಜೆ) ಅನುಚ್ಛೇದ ಸೇರ್ಪಡೆಯನ್ವಯ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013 ನ್ನು ಜಾರಿಗೊಳಿಸಲಾಗಿದೆ. ನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 43 ಹೆಚ್ ಕೆಸಿ 2013, ದಿನಾಂಕ: 29.01.2014 ರಲ್ಲಿ ನಿಯಮಗಳನ್ನು ರಚಿಸಿ, ಹೈದ್ರಾಬಾದ್-ಕರ್ನಾಟಕ (ಕಲ್ಯಾಣ ಕರ್ನಾಟಕ) ಭಾಗದ ಜನರಿಗೆ ಕಲಂ 371(ಜೆ) ರಡಿ ವಸತಿ ಮತ್ತು ಅರ್ಹತಾ ಪ್ರಮಾಣ ಪತ್ರವನ್ನು ವಿತರಿಸುವ ಬಗ್ಗೆ ಅಗತ್ಯ ಮಾನದಂಡಗಳನ್ನು ರೂಪಿಸಲಾಗಿದೆ.<br><br>ಅದರಂತೆ, ಸರ್ಕಾರದ ಆದೇಶ ಸಂಖ್ಯೆ: ಕಂಇ 61 ಎಜಿಎಸ್ 2015; ದಿನಾಂಕ: 31.07.2015 ರಲ್ಲಿ ಹೈದ್ರಾಬಾದ್-ಕರ್ನಾಟಕ ಪ್ರದೇಶದ ಜನರಿಗೆ ಪರಿಚ್ಛೇದ 371(ಜೆ) ರಡಿಯಲ್ಲಿ ನೇಮಕಾತಿಯಲ್ಲಿ ಮೀಸಲಾತಿಗಾಗಿ ಸಲ್ಲಿಸಬೇಕಾಗಿರುವ ವಸತಿ ಮತ್ತು ಅರ್ಹತಾ ಪ್ರಮಾಣ ಪತ್ರಗಳಿಗಾಗಿ ಅರ್ಜಿಗಳನ್ನು ನಾಡಕಛೇರಿ ತಂತ್ರಾಂಶದ ಮೂಲಕ ಪಡೆದು ತಂತ್ರಾಂಶದಲ್ಲಿ ಅಳವಡಿಸಿರುವ ವಸತಿ ಮತ್ತು ಅರ್ಹತಾ ಪ್ರಮಾಣ ಪತ್ರಗಳನ್ನು ತಹಶೀಲ್ದಾರ್ / ಉಪ ವಿಭಾಗಾಧಿಕಾರಿಗಳಿಂದ ವಿದ್ಯುನ್ಮಾನವಾಗಿ ಸಹಿ ಮಾಡಿ ವಿತರಿಸಬೇಕೆಂದು ಆದೇಶವಾಗಿರುತ್ತದೆ.<br><br>ಸರ್ಕಾರದ ಆದೇಶದಂತೆ, ದಿನಾಂಕ: 08.08.2015 ರಿಂದ ಆಗಸ್ಟ್-2020 ರ ಅಂತ್ಯದವರೆಗೆ ನಾಡಕಛೇರಿ ತಂತ್ರಾಂಶದ ಮೂಲಕ ವಿತರಿಸಿರುವ ಅರ್ಹತಾ ಪ್ರಮಾಣ ಪತ್ರಗಳ ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ:<br><br><table><tr><th>ಕ್ರ.ಸಂ.</th><th>ಜಿಲ್ಲೆ</th><th>ವಿತರಿಸಿದ ಪ್ರಮಾಣ ಪತ್ರಗಳ ಸಂಖ್ಯೆ:</th></tr><tr><td>1.</td><td>ಬಳ್ಳಾರಿ</td><td>135329</td></tr><tr><td>2.</td><td>ಬೀದರ್</td><td>54749</td></tr><tr><td>3.</td><td>ಕಲಬುರಗಿ</td><td>130027</td></tr><tr><td>4.</td><td>ಕೊಪ್ಪಳ</td><td>57999</td></tr><tr><td>5.</td><td>ರಾಯಚೂರು</td><td>90676</td></tr><tr><td>6.</td><td>ಯಾದಗಿರಿ</td><td>40683</td></tr><tr><td colspan="2">ಒಟ್ಟು</td><td>509463</td></tr></table> |

<table>
<tr><td>ಆ)</td><td>ಸದರಿ ಪ್ರಮಾಣ ಪತ್ರಗಳು ಯಾವ ಯಾವ ಯೋಜನೆಗಳಿಗೆ ಅತ್ಯಂತ ಅವಶ್ಯಕವಾಗಿ; (ವಿವರಗಳನ್ನು ನೀಡುವುದು)</td><td>ಸದರಿ ಪ್ರಮಾಣ ಪತ್ರಗಳು ಪ್ರಮುಖವಾಗಿ ಶಿಕ್ಷಣ ಮತ್ತು ಉದ್ಯೋಗದ ಉದ್ದೇಶಕ್ಕಾಗಿ ಅಗತ್ಯವಿರುತ್ತದೆ.</td></tr>
<tr><td>ಇ)</td><td>ಪ್ರಸಕ್ತ ಸಾಲಿನಲ್ಲಿ ಪ್ರತಿ ಜಿಲ್ಲೆಯಲ್ಲಿ ವಿತರಿಸಲಾದ ಪ್ರಮಾಣ ಪತ್ರಗಳ ಸಂಖ್ಯೆ ಎಷ್ಟು?</td><td>ಪ್ರಸಕ್ತ ಸಾಲಿನಲ್ಲಿ, ಅಂದರೆ, ಏಪ್ರಿಲ್-2020 ರಿಂದ ಆಗಸ್ಟ್-2020 ರ ಅಂತ್ಯದವರೆಗೆ ಅರ್ಹತಾ ಪ್ರಮಾಣ ಪತ್ರಗಳಿಗಾಗಿ ಸಾರ್ವಜನಿಕರಿಂದ ನಾಡಕಛೇರಿ ತಂತ್ರಾಂಶದ ಮೂಲಕ ಈ ಕೆಳಕಂಡಂತೆ 26704 ಅರ್ಜಿಗಳನ್ನು ಸ್ವೀಕರಿಸಿ 10339 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿರುತ್ತದೆ. ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ.ಸಂ.</th><th>ಜಿಲ್ಲೆ</th><th>ಸ್ವೀಕರಿಸಿದ ಅರ್ಜಿಗಳ ಸಂಖ್ಯೆ</th><th>ವಿತರಿಸಿದ ಪ್ರಮಾಣ ಪತ್ರಗಳ ಸಂಖ್ಯೆ</th></tr>
<tr><td>1.</td><td>ಬಳ್ಳಾರಿ</td><td>6744</td><td>2477</td></tr>
<tr><td>2.</td><td>ಬೀದರ್</td><td>3732</td><td>1362</td></tr>
<tr><td>3.</td><td>ಕಲಬುರಗಿ</td><td>6470</td><td>2007</td></tr>
<tr><td>4.</td><td>ಕೊಪ್ಪಳ</td><td>3096</td><td>1241</td></tr>
<tr><td>5.</td><td>ರಾಯಚೂರು</td><td>4924</td><td>2459</td></tr>
<tr><td>6.</td><td>ಯಾದಗಿರಿ</td><td>1738</td><td>793</td></tr>
<tr><td colspan="2">ಒಟ್ಟು</td><td>26704</td><td>10339</td></tr>
</table>
</td></tr>
</table>

**ಸಂಖ್ಯೆ: ಕಂಇ 123 ಎಸ್ಎಸ್ಸಿ 2020**

**(ಆರ್. ಅಶೋಕ)**
ಕಂದಾಯ ಸಚಿವರು